O.S. NO. 16/2018
PW - 2 .
Dated 14 -07-2026.

ಸಾಕ್ಷಿಯನ್ನು ಈ ದಿನ ದಿನಾಂಕ 14-07-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ 9 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್ ಜೆ ಬಿ ವಕೀಲರಿಂದಃ

9 ನೇ ಪ್ರತಿವಾದಿ ನನ್ನ ಸೊದರತ್ತೆಯ ಗಂಡ ಎಂದರೆ ಸರಿ. ನನ ಅಜ್ಜಿ ಮಲ್ಲವ್ವ 9 ನೇ ಪ್ರತಿವಾದಿಯ ಸೊದರತ್ತೆ ಎಂದರೆ ನಿಜ. ಹೀಗಾಗಿ ನಮ್ಮ ಕುಟುಂಬ ಮತ್ತು 9 ನೇ ಪ್ರತಿವಾದಿಯ ಕುಟುಂಬದ ಮದ್ಯೆ ಅನ್ಯೋನ್ಯ ಸಂಬಂದ ಇರುತ್ತದೆ ಎಂದರೆ ಸಂಬಂದ ಇದೆ ಅನ್ಯೋನ್ಯವಾಗಿ ಇಲ್ಲ ಎಂದು ನುಡಿದಿರುತ್ತಾರೆ. ಯಾವಾಗಿನಿಂದ ಅನ್ಯೋನ್ಯವಾಗಿ ಇಲ್ಲ ಎಂದರೆ ಸಾಕ್ಷಿ ನಮ್ಮ ಅಜ್ಜನ ಕಾಲದಿಂದಲೂ ಇಲ್ಲ ಎಂದು ನುಡಿದಿರುತ್ತಾರೆ. ಸಂಬಂದ ಅನ್ಯೋನ್ಯವಾಗಿ ಇಲ್ಲದೇ ಇದ್ದರೇ ನನ್ನ ಅಜ್ಜನ ಮಗಳು 9 ನೇ ಪ್ರತಿವಾದಿಗೆ ಏಕೆ ಕೊಟ್ಟು ಮದುವೆ ಮಾಡುತ್ತಿದ್ದರು ಎಂದರೆ ಸಂಬಂದ ಸಲುವಾಗಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಸಾಮಾನ್ಯವಾಗಿ ಸಂಬಂದ ಚೆನ್ನಾಗಿ ಇದ್ದೇರೆ ಮಾತ್ರ ಹೆಣ್ಣು ಮಕ್ಕಳನ್ನು ಕೊಟ್ಟು ಮದುವೆ ಮಾಡುತ್ತಾರೆ ಎಂದರೆ ನಿಜ. 9 ನೇ ಪ್ರತಿವಾದಿಯ ಊರು ಸವದತ್ತಿ ತಾಲೂಕಿನ ಅಸುಂಡಿ ಗ್ರಾಮ ಎಂದರೆ ನಿಜ. 9 ನೇ ಪ್ರತಿವಾದಿ ತನ್ನ ಸ್ವಂತ ಗ್ರಾಮವಾದ ಅಸುಂಡಿಯಿಂದ ಬಂದು ಪಟ್ಟಿಹಾಳ ಗ್ರಾಮದಲ್ಲಿ ಖಾಯಂ ತರಿಖವಾಗಿ ಬಂದು ವಾಸವಿದ್ದಾನೆ ಎಂದರೆ ಸರಿ. ಹೀಗೆ ಬಂದು ಪಟ್ಟಿಹಾಳದಲ್ಲಿ ವಾಸವಿದ್ದುದರಿಂದ 9 ನೇ ಪ್ರತಿವಾದಿ ನಮ್ಮ ಮನೆತನದ ಆಸ್ತಿ ಜಿ ಪಿ

O.S. NO. 16/2018

PW - 2 .

Dated 14 -07-2026.

ನಂ. 88 ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಬಸವಂತಪ್ಪ ಯಲ್ಲಪ್ಪ ಪಟ್ಟನಶೆಟ್ಟಿ ಎಂದರೆ ನನ್ನ ಅಜ್ಜ. ಸದರಿ ಆಸ್ತಿ ಕುರಿತು ಈಗ ತೋರಿಸಿದ ಖರೀದಿ ತರ ಬೈಲಹೊಂಗಲ ದಲ್ಲಿ ನೊಂದಣಿ ಆಗಿರುತ್ತದೆ ಸಾಕ್ಷಿ ಖೊಟ್ಟಿ ಸೃಷ್ಟಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಖರೀದಿ ಪತ್ರ ಖೊಟ್ಟಿ ಇದೆ ಅಂತಾ ನನ್ನ ಅಜ್ಜ, ಅಜ್ಜನ ಸಹೊದರರು ಮತ್ತು ನನ್ನ ತಂದೆ ತಾಯಿ ಆಗಲಿ ಪ್ರಶ್ನಿಸಿದ್ದೀರಾ ಎಂದರೆ ಸದರಿ ಖರೀದಿ ಪತ್ರ ನಮಗೆ ಮಾಹಿತಿ ಸಿಕ್ಕಿರಲಿಲ್ಲ ಎಂದು ನುಡಿದಿರುತ್ತಾರೆ. ಪ್ರಸ್ತುತ ಪ್ರಕರಣದ ಬಗ್ಗೆ ನನಗೆ ವಯಕ್ತಿಕವಾಗಿ ಎಲ್ಲ ಮಾಹಿತಿ ಇರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಪ್ರತಿವಾದಿಗಳು ಹಾಜರು ಪಡಿಸಿದ ದಾಖಲೆಗಳ ಬಗ್ಗೆ ಮಾಹಿತಿ ಇದೆಯಾ ಎಂದರೆ ಇರುತ್ತದೆ. 9 ನೇ ಪ್ರತಿವಾದಿ ಜೆ ಪಿ ನಂ 88 ನ್ನು ಖರೀದಿ ಮಾಡಿದ ಕುರಿತು ಖರೀದಿ ಪತ್ರವನ್ನು ಪ್ರಸ್ತುತ ಪ್ರಕರಣದಲ್ಲಿ 2018 ರಲ್ಲಿ ಸಲ್ಲಿಸಿದ್ದು 2018 ರಿಂದ ನಾನಾಗಲಿ ನನ್ನ ತಂದೆ ಆಗಲಿ ಸದರಿ ಖರೀದಿ ಪತ್ರ ಪ್ರಶ್ನಿಸಿದ್ದೀರಾ ಎಂದರೆ ಸಾಕ್ಷಿ ಅದು ಖೊಟ್ಟಿರುವುದರಿಂದ ಪ್ರಶ್ನಿಸಿಲ್ಲ ಎಂದು ನುಡಿದಿರುತ್ತಾರೆ. ಸದರಿ ಖರೀದಿ ಪತ್ರ ಸರಿಯಾದ ದಾಖಲೆ ಇರುವುದರಿಂದ ಅದನ್ನು ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಖರೀದಿ ಪತ್ರ ಇಲ್ಲಿಯವರೆಗೆ ಚಾಲ್ತಿಗೆ ಬಂದಿರುವುದಿಲ್ಲ ಎಂದು ನುಡಿದಿರುತ್ತಾರೆ. 1990 ರಿಂದ 2000 ರವರೆಗೆ ಬರಗಾಲ ಇತ್ತು ಎಂದರೆ ಸರಿಯಲ್ಲ. ಹೀಗಾಗಿ ರೈತರು ಸರ್ಕಾರ ದಿಂದ ಪರಿಹಾರ ಹಣ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮ ಕುಟುಂಬದವರು ಸಹ ಬರಗಾಲ ಪರಿಹಾರ ಹಣ ಪಡೆದಿರುತ್ತಾರೆ

O.S. NO. 16/2018

PW - 2 .

Dated 14 -07-2026.

ಎಂದರೆ ಸರಿಯಲ್ಲ. ನಮ್ಮ ಕುಟುಂಬದವರು ಬರಗಾಲ ಪರಿಹಾರ ಹಣ ಪಡೆದರು ಸಹ ಪಡೆದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿ ತನ್ನ ಮೂಲ ಊರಾದ ಅಸುಂಡಿ ಗ್ರಾಮದಲ್ಲಿ ಇದ್ದ ತನ್ನ 4 ಎಕರೆ 16 ಗುಂಟೆ ಆಸ್ತಿ ಮಾರಾಟ ಮಾಡಿದ್ದನು ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಮಾರಾಟದಿಂದ ಬಂದ ಹಣ ತನ್ನ ಹತ್ತಿರ ಇಟ್ಟು ಕೊಂಡಿದ್ದನು ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಸರ್ವೆ ನಂ 55 ನನ್ನ ಅಜ್ಜ ಬಸವಂತಪ್ಪನಿಗೆ ರೈತಾಪಿಯಿಂದ ಬಂದಿರುವ ಆಸ್ತಿ ಇರುತ್ತೆ ಎಂದರೆ ನಿಜ. ನನ್ನ ಅಜ್ಜ ಬಸವಂತಪ್ಪ ರವರು ಸರ್ಕಾರಕ್ಕೆ ಹಣ ಭರಣಾ ಮಾಡಿ ಟೆನೆನ್ಸಿ ನಾತೆಯಿಂದ ಆಸ್ತಿ ತನ್ನ ಹೆಸರಿಗೆ ಮಾಡಿಕೊಂಡನು ಎಂದರೆ ಸಾಕ್ಷಿ ತನ್ನ ಸ್ವಂತ ದುಡಿಮೆ ಹಣ ಭರಣಾ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಸರ್ವೆ ನಂ. 55 ನನ್ನ ಅಜ್ಜನ ಸ್ವಂತ ಆಸ್ತಿ ಎಂದರೆ ಸಾಕ್ಷಿ ಆ ಸಮಯದಲ್ಲಿ ಕುಟುಂಬದ ಎಲ್ಲರೂ ನಮ್ಮ ಅಜ್ಜ ಜೊತೆ ದುಡಿಯುತ್ತಿದ್ದರು ಎಂದು ನುಡಿದಿರುತ್ತಾರೆ. ಸರ್ವೆ ನಂ. 55ರಲ್ಲಿ ನನ್ನ ತಂದೆ ಹೆಸರು ದಾಖಲಾಗಿದೆಯಾ ಎಂದರೆ ಇನ್ನೂ ವಾಟ್ನಿ ಆಗಿಲ್ಲ ಹೀಗಾಗಿ ದಾಖಲಾಗಿಲ್ಲ. ಸರ್ವೆ ನಂ. 55 ರಲ್ಲಿ ನನ್ನ ತಂದೆಗೆ ಯಾವುದೇ ಹಕ್ಕು ಇಲದೇ ಇರುವುದರಿಂದ ಆತನ ಹೆಸರು ಸದರಿ ಆಸ್ತಿಗಳ ದಾಖಲಾತಿಗಳಲ್ಲಿ ದಾಖಲಾಗಿರುವುದಿಲ್ಲ ಎಂದರೆ ಸರಿಯಲ್ಲ. 1994 ರಲ್ಲಿ ನಮ್ಮ ಕುಟುಂಬಕ್ಕೆ ಆರ್ಥಿಕ ಅಡಚಣೆ ಉಂಟಾಗಿತ್ತು ಎಂದರೆ ಸರಿಯಲ್ಲ. ಆ ಸಮಯದದಲ್ಲಿ ನನ್ನ ತಂದೆ ಸಿವಿಲ ಗುತ್ತಿಗೆದಾರ ಕೆಲಸ ಮಾಡುತ್ತಿದ್ದರು. ಆ ಕುರಿತು ಪರವಾನಿಗೆ ತೊಂದರೆಯಾ ಎಂದರೆ ಇದೆ

O.S. NO. 16/2018
PW - 2 .
Dated 14 -07-2026.

ಹಾಜರು ಮಾಡಿದ್ದಿರಾ ಎಂದರೆ ಮಾಡುತ್ತೇನೆ. ನನ್ನ ತಂದೆ ಸಿವಿಲ ಗುತ್ತಿಗೆ ಕೆಲಸ ಮಾಡುತ್ತಿದ್ದರು ಎನ್ನುವುದಕ್ಕೆ ವ್ಯವಹಾರಗಳ ಕಾಗದ ಪತ್ರ ಹಾಜರು ಮಾಡಿದ್ದೀರಾ ಎಂದರೆ ಮಾಡಿಲ್ಲ ಮುಂದೆ ಮಾಡುತ್ತೇನೆ. ಸಿವಿಲ ಗುತ್ತಿಗೆದಾರರು ಟ್ಯಾಕ್ಸ ತುಂಬುವವರು ಇರುತ್ತಾರೆ ಎಂದರೆ ಸರಿ. ನನ್ನ ತಂದೆ ಈಗ ಪಂಚಾಯತಿಯ ಉದ್ಯೋಗ ಖಾತ್ರಿ ಯೊಜನೆ ಅಡಿ ಕೂಲಿ ಕೆಲಸಕ್ಕೆ ಹೊಗುತ್ತಾರೆ ಎಂದರೆ ಹಿರಿಯ ನಾಗರಿಕ ಕೊಟಾದ ಅಡಿಯಲ್ಲಿ ಹೊಗುತ್ತಾರೆ ಎಂದು ನುಡಿದಿರುತ್ತಾರೆ. ಆ ಕುರಿತು ಪಂಚಾಯತಿರವರು ಹಿರಿಯ ನಾಗರಿಕರ ಕೊಟಾ ಅಂತಾ ಪ್ರಮಾಣ ಪತ್ರ ಕೊಟ್ಟಿರುತ್ತಾರೆ. ಅದನ್ನು ಹಾಜರು ಮಾಡಿದ್ದೀರಾ ಎಂದರೆ ಮಾಡಿದ್ದೇನೆ. ಸಾಕ್ಷಿಗೆ ಕಡತದಲ್ಲಿರುವ ನಿಪಿ - 1 ರಿಂದ 58 ದಾಖಲೆಗಳನ್ನು ತೊರಿಸಿ ಅವುಗಳಲ್ಲಿ ನನ್ನ ತಂದೆಗೆ ಪಂಚಾಯತಿರವರು ಹಿರಿಯ ನಾಗರಿಕರ ಕೊಟಾ ಎಂದು ಕೊಟ್ಟ ಪ್ರಮಾಣ ಪತ್ರ ಇದೆಯಾ ಎಂದು ಸೂಚಿಸಲಾಗಿ ಸಾಕ್ಷಿ ಅವುಗಳನ್ನು ನೊಡಿದ ನಂತರ ನನಗೆ ಕನ್ಪುಸ ಆಗಿ ಹೇಳಿದ್ದೇನೆ ಅದರಲ್ಲಿ ಪ್ರಮಾಣ ಪತ್ರ ಇಲ್ಲ ಎಂದು ನುಡಿದಿರುತ್ತಾರೆ. ನಾನು ಪಿಯುಸಿ ವರೆಗೆ ಓದಿರುತ್ತೇನೆ. ನನಗೆ ಸಾಮಾನ್ಯ ಕಾನೂನ ಜ್ಞಾನ ಇರುತ್ತದೆ ಎಂದರೆ ಸರಿ. ನನಗೆ ಎಲ್ಲ ಸಾಮಾನ್ಯ ಜ್ಞಾನ ಇದ್ದರು ಸಹ ಹಾಜರು ಮಾಡದ ದಾಖಲಾತಿಗಳ ಬಗ್ಗೆ ಹಾಜರು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1994 ರಲ್ಲಿ ಬರಗಾಲ ನಿಮಿತ್ತ ನಮ್ಮ ಕುಟುಂಬಕ್ಕೆ ಆದ ಆರ್ಥಿಕ ಅಡಚಣೆ ಗೊಸ್ಕರ

O.S. NO. 16/2018
PW – 2 .
Dated 14 –07–2026.

ಸರ್ವೆ ನಂ. 55 ರಲ್ಲಿಯ 9 ಎಕರೆ ಆಸ್ತಿ ಮಾರಾಟಕ್ಕೆ ಹಚ್ಚಿದ್ದರು ಎಂದರೆ ಸರಿಯಲ್ಲ. ಆಗ ನನ್ನ ಅಜ್ಜ 9 ನೇ ಪ್ರತಿವಾದಿಗೆ ಬೇಟಿ ಆಗಿ ಸದರಿ ಆಸ್ತಿಯನ್ನು ನೀನೆ ತೊಗೊ ಅಂತಾ ಮನವಿ ಮಾಡಿಕೊಂಡನು ಎಂದರೆ ಸುಳ್ಳು. ನಮ್ಮ ಕುಟುಂಬದಲ್ಲಿ ನನ್ನ ತಂದೆ, ಆತನ ಸಹೊದರರು ಸಹೊದರಿಯರು ಎಲ್ಲರೂ ಸೇರಿ ಮಾರಾಟಕ್ಕೆ 9 ನೇ ಪ್ರತಿವಾದಿಗೆ ಮಾರಾಟ ಮಾಡಲು ನನ್ನ ಅಜ್ಜನಿಗೆ ಒಪ್ಪಿಗೆ ಸೂಚಿಸಿದರು ಎಂದರೆ ಸರಿಯಲ್ಲ. ಸದರಿ ಮಾರಾಟ ಮಾತುಕತೆಯಲ್ಲಿ 9 ನೇ ಪ್ರತಿವಾದಿಗೆ ರೂ. 50 ಸಾವಿರಗಳಿಗೆ ಮಾರಾಟ ಮಾಡುವ ಮಾತುಕತೆ ಆಯಿತು ಎಂದರೆ ಸರಿಯಲ್ಲ. ಸದರಿ ಮಾರಾಟದ ಸಮಯದಲ್ಲಿ ನನ್ನ ಅಜ್ಜ ಕುಟುಂಬದ ಹಿರೇತನ ಮಾಡುತ್ತಿದ್ದರು ಎಂದರೆ ಸಾಕ್ಷಿ ಜೊತೆಯಲ್ಲಿ ನನ್ನ ತಂದೆ ಸಹ ಹಿರಿತನ ಮಾಡುತ್ತಿದರು ಎಂದು ನುಡಿದಿರುತ್ತಾರೆ. ನನ್ನ ತಂದೆಯವರು ಸಹ ಹಿರೇತನ ಮಾಡುತ್ತಿದನು ಎನ್ನುವುದಕ್ಕೆ ಆತನು ಮಾಡಿದ ವ್ಯವಹಾರಗಳ ಕುರಿತು ದಾಖಲೆಗಳು ಹಾಜರು ಮಾಡಿದ್ದೀರಾ ಎಂದರೆ ಇಲ್ಲ. ನಮ್ಮ ಕುಟುಂಬ ಹಿರೇತನ ನನ್ನ ಅಜ್ಜ ಮಾತ್ರ ಮಾಡುತ್ತಿದ್ದರು ನನ್ನ ತಂದೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಸಹ ಕುಟುಂಬದ ಹಿರೇತನ ಮಾಡುತ್ತಿದ್ದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಸರ್ವೆ ನಂಬರನಲ್ಲಿಯ 9 ಎಕರೆ ಆಸ್ತಿಯನ್ನು ಖರೀದಿ ಹಣ ಏಕೆ ಖರ್ಚು ಮಾಡಬೇಕು ಅಂತಾ ನನ್ನ ಅಜ್ಜ ಆತನ ಮಗಳಾದ 9 ನೇ ಪ್ರತಿವಾದಿಯ ಹೆಂಡತಿಯಾದ 6 ನೇ ಪ್ರತಿವಾದಿ ಹೆಸರಿಗೆ ಅಪಸಾತ ವಾಟ್ನಿ ಮೂಲಕ ಹಕ್ಕು ಬಿಟ್ಟು ಕೊಟ್ಟರು ಎಂದರೆ ಸುಳ್ಳು. ಸದರಿ ಅಪಸಾತ ವಾಟ್ನಿ ಪ್ರಕಾರ

O.S. NO. 16/2018
PW – 2 .
Dated 14 –07–2026.

6 ನೇ ಪ್ರತಿವಾದಿ ಹೆಸರು 9 ಎಕರೆಗೆ ಆಸ್ತಿಯ ದಾಖಲಾತಿಗಳಲ್ಲಿ ದಾಖಲಾಯಿತು ಎಂದರೆ ಖೊಟ್ಟಿ ಆಗಿ ದಾಖಲಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ 6 ನೇ ಪ್ರತಿವಾದಿಯ ಹೆಸರು ಖೊಟ್ಟಿ ಆಗಿ ದಾಖಲಾಗಿದೆ ಎಂದು ಸೂಕ್ತ ಪ್ರಾದಿಕಾರ ಮುಂದೆ ಪ್ರಶ್ನಿಸಿದ್ದಿರಾ ಎಂದರೆ ಇಲ್ಲ. ಪ್ರಶ್ನಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಇನ್ನೂ ವಾಟ್ನಿ ಆಗಿರುವುದಿಲ್ಲ ಹೀಗಾಗಿ ಪ್ರಶ್ನಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. 6 ನೇ ಪ್ರತಿವಾದಿಯ ಹೆಸರು ದಾಖಲಾಗಿ ಈಗ 36 ವರ್ಷಗಳು ಆಗಿರುತ್ತವೆ ಎಂದರೆ ಸರಿ. 6 ನೇ ಪ್ರತಿವಾದಿ ಕಾನೂನು ಬದ್ದ ಮಾಲಿಕರು ಇರುತ್ತಾರೆ ಅಂತಾ ಆಕೆಯ ಹೆಸರು ದಾಖಲಾಗಿರುವುದನ್ನು ಇಲ್ಲಿವರೆಗೆ ನಾವು ಯಾರು ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ 9 ಎಕರೆ ಆಸ್ತಿ ಪೈಕಿ 5 ಎಕರೆ ಆಸ್ತಿ 6 ನೇ ಪ್ರತಿವಾದಿ ತನ್ನ ಗಂಡನಾದ 9 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಖೊಟ್ಟಿ ದಾಖಲಾತಿಗಳನ್ನು ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ 9 ನೇ ಪ್ರತಿವಾದಿ ಹೆಸರು ಡೈರಿ ನಂ. 2991 ನೇದ್ದರ ಪ್ರಕಾರ ದಾಖಲಾಯಿತು ಎಂದರೆ ಖೊಟ್ಟಿ ಇರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಡೈರಿ ನಂ. 2991 ನೇದ್ದನು ಸಹ ನಾನಾಗಲಿ ಮತ್ತು ನನ್ನ ತಂದೆ ಆಗಲಿ ಪ್ರಶ್ನಿಸಿಲ್ಲ ಎಂದರೆ ನಮ್ಮ ಕುಟುಂಬದಲ್ಲಿ ಇನ್ನೂ ವಾಟ್ನಿ ಆಗದೇ ಇದ್ದುದರಿಂದ ಪ್ರಶ್ನಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. 6 ನೇ ಪ್ರತಿವಾದಿ ಕಾನೂನು ಬ್ದದವಾಗಿ ತನ್ನ ಆಸ್ತಿಯನ್ನು 9 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿದ್ದರಿಂದ ಸದರಿ ಮೇಲಿನ ಡೈರಿಯನ್ನು ನಾವು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ನಂತರ 6

O.S. NO. 16/2018

PW – 2 .

Dated 14 –07–2026.

ನೇ ಪ್ರತಿವಾದಿ ಉಳಿದ 4 ಎಕರೆ ಜಮಿನನ್ನು 10 ನೇ ಪ್ರತಿವಾದಿಗೆ ನೊಂದಾಯಿತ ಖರೀದಿ ಪತ್ರ ಮೂಲಕ ಖರೀದಿ ಕೊಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರದ ಪ್ರಕಾರ 10 ನೇ ಪ್ರತಿವಾದಿ ಹೆಸರು 4 ಎಕರೆ ಆಸ್ತಿಗೆ ಹಕ್ಕು ದಾಖಲಾಗಿರುತ್ತದೆ ಎಂದರೆ ಸುಳ್ಳು ದಾಖಲಾತಿಗಳ ಮೇಲೆ ದಾಖಲಾಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ದಾಖಲಾತಿಗಳು ಸುಳ್ಳು ಇವೆ ಅಂತಾ ನಾನಾಗಲಿ ಮತ್ತು ನನ್ನ ತಂದೆ ಆಗಲಿ ಸೂಕ್ತ ಪ್ರಾಧಿಕಾರ ಮುಂದೆ ಪ್ರಶ್ನಿಸಿದ್ದಿರಾ ಎಂದರೆ ಇಲ್ಲ. ಸದರಿ ದಾಖಲಾತಿಗಳು ಸರಿ ಇದ್ದುದರಿಂದ ನಾವು ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ಈಗ ತೊರಿಸಿದ ಅಪಸಾತ ವಾಟ್ನಿ ಪತ್ರದಲ್ಲಿ ನನ್ನ ತಂದೆ ಸಹಿ ಎಲ್ಲಿ ಇದೆ ಎಂದು ಗುರುತಿಸಲು ಸೂಚಿಸಲಾಗಿ ಸಾಕ್ಷಿ ನನ್ನ ತಂದೆಯ ಸಹಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ತಹಶೀಲ್ದಾರರವರು ಕೊಟ್ಟ ನೊಟಿಸಿನ ದೃಡಿಕೃತ ನಕಲಿನಲ್ಲಿ ನನ್ನ ತಂದೆಯ ಸಹಿ ಇದೆಯಾ ಎಂದರೆ ಇಲ್ಲ. 6 ನೇ ಪ್ರತಿವಾದಿ ಹೆಸರಿಗೆ 9 ಎಕರೆ ಜಮಿನು ಹಕ್ಕು ದಾಖಲಾಗುವಾಗ ನನ್ನ ಅಜ್ಜನ ಜೊತೆ ನನ್ನ ತಂದೆಯು ಸಹ ಸಹಿ ಮಾಡಿರುತ್ತಾರೆ ಎಂದರೆ ಸುಳ್ಳು. ಆ ಸಮಯದಲ್ಲಿ ಕಂದಾಯ ಇಲಾಖೆಯವರು ನನ್ನ ತಂದೆಗೆ ಸಹ ನೊಟಿಸು ಜಾರಿ ಮಾಡಿರುತ್ತಾರೆ ಎಂದರೆ ಸುಳ್ಳು. ಸದರಿ ನೊಟಿಸು ನನ್ನ ತಂದೆ ಸ್ವಿಕರಿಸಿದ ಕುರಿತು ಸಹಿ ಸಹ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ. 55 ರಲ್ಲಿಯ ಜಮಿನಿಗೆ ನಮ್ಮ ಕುಟುಂಬದವರ ಯಾರದು ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಆಸ್ತಿಯ ಮೌಲ್ಯ ಇತ್ತಿಚೆಗೆ ಹೆಚ್ಚಾಗಿದ್ದರಿಂದ ಹೇಗಾದರೂ ಮಾಡಿ ದಾವಾ ಆಸ್ತಿಗಳನ್ನು ಎತ್ತಿಹಾಕಬೇಕೆಂದು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ

ಸರಿಯಲ್ಲ. ನನ್ನ ತಂದೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ನಿಜ ಸಂಗತಿ ಗೊತ್ತಾಗುತ್ತದೆ ಅಂತಾ ಖೊಟ್ಟಿ ಮುಕ್ತಿಯಾರ ಪತ್ರ ಬರೆಸಿಕೊಂಡು ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ 11 ರಿಂದ 17 ನೇ ಪ್ರತಿವಾದಿಯರ ಪರವಾಗಿ ಶ್ರೀ ಆರ್ ಎಸ್ ಡಿ ವಕೀಲರಿಂದಃ

ನಮ್ಮ ಕುಟುಂಬದಲ್ಲಿ ಯಾರಾದರೂ ಮೇಕೆಗಳು ಸಾಕಾಗಿದ್ದಾರೆ ಎಂದರೆ ನಾವೆ ಸಾಕಿದ್ದೇವೆ ಎಂದು ನುಡಿದಿರುತ್ತಾರೆ. ಎಷ್ಟು ಮೇಕೆಗಳು ಸಾಕಿದ್ದೀರಾ ಎಂದರೆ 10-12 ಇರುತ್ತವೆ. ಸದರಿ ಮೇಕೆಗಳನ್ನು ನಾವು ರಾತ್ರಿ ವೇಳೆಯಲ್ಲಿ ಮನೆಯಲ್ಲಿ ಕಟ್ಟುತ್ತೇವೆ, ದಿನದಲ್ಲಿ ಸರ್ವೆ ನಂ. 188/1 ರಲ್ಲಿಯ ಜಮಿನದಲ್ಲಿ ಕಟ್ಟುತ್ತೇವೆ. ಸದರಿ ಜಮಿನದಲ್ಲಿ ಮೇಕೆಗಳಿಗೆ ಶೆಡ್ಡು ಹಾಕಿದ್ದೇವೆ. ಸದರಿ ಶೆಡ್ಡು 7-8 ವರ್ಷಗಳ ಹಿಂದೆ ಹಾಕಿರುತ್ತೇವೆ. ದಾವಾ ಸಲ್ಲಿಸುವ ಸಮಯದಲ್ಲಿ ಶೆಡ್ಡು ಇತ್ತಾ ಎಂದರೆ ಇತ್ತು. ನಾವು ಮೇಕೆ ಸಾಕಿದ್ದೇವೆ ಎನ್ನುವುದು, ಮತ್ತು ಸದರಿ ಮೇಕೆಗಳನ್ನು ಸರ್ವೆ ನಂ. 188/1 ರಲ್ಲಿ ಶೆಡ್ಡು ಹಾಕಿಕೊಂಡು ಕಟ್ಟಿರುತ್ತೇವೆ ಎನ್ನುವುದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ.

ನಾನು ಬೈಲಹೊಂಗಲನ ಕೆ ಆರ್ ಸಿ ಎಸ್ ಪಿಯು ಕಾಲೇಜನಲ್ಲಿ ಪಿಯುಸಿ ವರೆಗೆ ಶಾಲೆ ಕಲಿತಿದ್ದೇನೆ. ನಾನು ಸುಮಾರು 20 ವರ್ಷಗಳಿಂದ ಶೇತ್ಕಿ ಮಾಡುತ್ತಿದ್ದೇನೆ. ನನ್ನ

O.S. NO. 16/2018

PW - 2 .

Dated 14 -07-2026.

ತಂದೆಗೆ ಮತ್ತು ನನಗೆ ಕಾನೂನಿನ ಸಂಪೂರ್ಣ ಜ್ಞಾನ ಇರುತ್ತದೆ ಎಂದರೆ ಸರಿ. ನಮ್ಮ ಕುಟುಂಬದ ಆಸ್ತಿಗಳು ಎಲ್ಲಿ ಎಲ್ಲಿ ಇರುತ್ತವೆ ಎಂದು ನನಗೆ ಮತ್ತು ನನ್ನ ತಂದೆ ಸಂಪೂರ್ಣ ಮಾಹಿತಿ ಇದೆ ಎಂದರೆ ನಿಜ. ನಮ್ಮ ಕುಟುಂಬದ ಜಮಿನಗಳಿಗೆ ನಾನು ಮತ್ತು ನನ್ನ ತಂದೆ ದಿನಾಲೂ ಹೊಗಿ ಬಂದು ಮಾಡುತ್ತೇವೆ ಎಂದರೆ ನಿಜ. ದಾವಾ ಆಸ್ತಿಗಳ ಪೈಕಿ ಸರ್ವೆ ನಂ. 188/1 ರಲ್ಲಿಯ ಜಮಿನು ನಾನು ನೊಡಿರುತ್ತೇನೆ. ಸದರಿ ಜಮಿನದಲ್ಲಿ ಈಗ ಯಾವ ಬೆಳೆ ಇದೆ ಎಂದರೆ ಸಾಕ್ಷಿ ಯಾವುದು ಬೆಳೆ ಬೆಳೆಯುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಜಮಿನದಲ್ಲಿ ಪ್ರಸ್ತುತ ಪ್ರಕರಣ ದಾಖಲಾದ ಸ್ವಲ್ಪ ದಿನಗಳ ನಂತರದಿಂದ ಯಾವುದೇ ಬೆಳೆ ಬೆಳೆದಿಲ್ಲ. ಸ್ವಲ್ಪ ದಿನಗಳ ನಂತರ ಅಂದರೆ ಕಳೆದ 4-5 ವರ್ಷಗಳಿಂದ ಸದರಿ ಜಮಿನದಲ್ಲಿ ಯಾವುದೇ ಬೆಳೆಗಳು ಬೆಳೆಯುತ್ತಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

ಸಾಮಾನ್ಯವಾಗಿ ಯಾರಾದರೂ ವ್ಯಕ್ತಿಗಳು ತಮ್ಮ ಜಮಿನದಲ್ಲಿ ಬೇರೆ ಯಾರಾದರೂ ಅತಿಕ್ರಮಣ ಮಾಡಿದರೆ ತತಕ್ಷಣ ಕ್ರಮ ಕೈಗೊಳ್ಳುತ್ತಾರೆ ಮತ್ತು ಕಾನೂನಿನ ಕ್ರಮ ಕೈಗೊಳ್ಳುತ್ತಾರೆ ಎಂದರೆ ನಿಜ. ಸರ್ವೆ ನಂ. 188/1 ರಲ್ಲಿ 11 ರಿಂದ 17 ನೇ ಪ್ರತಿವಾದಿಗಳು ವಾಸದ ಮನೆಗಳನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರಸ್ತುತ ಪ್ರಕರಣ ಚಾಲ್ತಿ ಆದ ನಂತರ ನಮಗೆ ಮೊಸ ಮಾಡಬೇಕು ಅಂತಾ 3 ನೇ ಪ್ರತಿವಾದಿಯ ಚಿತಾವಣೆ ಮೇರೆಗ ಮನೆಗಳು ಕಟ್ಟಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಪ್ರಸ್ತುತ ದಾವೆ ದಾಖಲಾದ 2-3 ತಿಂಗಳ ನಂತರ ಸದರಿ ಮನೆಗಳನ್ನು

ಕಟ್ಟಲು ಪ್ರಾರಂಬಿಸಿದರು. ನಾವು ಕಾನೂನು ಪ್ರಕಾರ ಪಂಚಾಯತಿಯವರಿಗೆ ಮತ್ತು ಮಾನ್ಯ ನ್ಯಾಯಾಲಯಕ್ಕೆ ಸಹ ಮನಾಯಿ ಆದೇಶ ಕೊರಿ ಅರ್ಜಿ ಸಲ್ಲಿಸಿದ್ದೇವು. ಪ್ರಸ್ತುತ ದಾವೆ ದಾಖಲಾಗುವ ಪೂರ್ವದಲ್ಲಿ ಸದರಿ ಜಮಿನದಲ್ಲಿ ವಾಸದ ಮನೆಗಳು ಕಟ್ಟಿರುತ್ತಾರೆ, ದಾಖಲಾದ ನಂತರ ಕಟ್ಟಿದಾರೆ ಎನ್ನುವುದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. ಇವತ್ತಿಗೂ ತುಂಡು ಜಮಿನುಗಳು ಖರೀದಿ ಆಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಹೀಗಾಗಿ ಸರ್ವೆ ನಂ. 188/1 ರಲ್ಲಿಯ ಜಮಿನನ್ನು 11, 12,15 ನೇ ಪ್ರತಿವಾದಿ ರವರ ಹೆಂಡತಿಯರು ಹಾಗೂ 17 ನೇ ಪ್ರತಿವಾದಿಯ ತಾಯಿ ಹಾಗೂ 3, 13, 14, 16 ನೇ ಪ್ರತಿವಾದಿಯರು ಮತ್ತು ಇನ್ನಿತರರು ಸೇರಿ 3 ನೇ ಪ್ರತಿವಾದಿ ಹೆಸರಿಗೆ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಹೀಗಾಗಿ ಈ ಮೆಲೆ ಹೇಳಿದ ಎಲ್ಲರೂ ಸರ್ವೆ ನಂ. 188/1 ರ ಸಾಮಾಹಿಕ ಮಾಲಿಕರು ಮತ್ತು ಕಬ್ಜಾದಾರರು ಇರುತ್ತಾರೆ ಎಂದರೆ ಸರಿಯಲ್ಲ. ಸದರಿ ಈ ಮೇಲೆ ಹೇಳಿದ ಎಲ್ಲರೂ ತಮ್ಮ ಹಿಸ್ಸೆಗೆ ತಕ್ಕಂತೆ ಖರೀದಿ ಹಣವನ್ನು ಸಂದಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮಿನು ಖರೀದಿ ಗೆ ನಮ್ಮ ಏಕತರ ಕುಟುಂಬದ ಉತ್ಪನ್ನವನ್ನು ವಿನಿಯೊಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಹೀಗಾಗಿ ನಾವು ಸದರಿ ಜಮಿನಿನ ಮಾಲಿಕರು ಮತ್ತು ಕಬ್ಜಾದಾರರು ಅಲ್ಲ ಎಂದರೆ ಸರಿಯಲ್ಲ. ಹೀಗಾಗಿ ಸದರಿ ಸರ್ವೆ ನಂ. 188/1 ರ ಜಮಿನುದಲ್ಲಿ ನಮಗೆ ಯಾವುದೇ ಹಕ್ಕು, ಹಿತ, ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ದಾವೆ ಮಾಡಿದರೇ ಸದರಿ ಆಸ್ತಿಗಳಲ್ಲಿ ಏನಾದರೂ ಸಿಗಬಹದು ಎಂಬ ದುರಾಶೆಯಿಂದ ಇದೊಂದು ಸುಳ್ಳು ದಾವೆ ಮಾಡಿದ್ದೆವೆ ಎಂದರೆ

O.S. NO. 16/2018
PW - 2 .
Dated 14 -07-2026.

ಸರಿಯಲ್ಲ. ಪ್ರಸ್ತುತ ಪ್ರಕರಣದಲ್ಲಿಯ ನ್ಯಾಯಾಲಯದ ಆಯುಕ್ತರು ಸ್ಥಳ ಪರಿಶಿಲನೆ ಮಾಡಿ 6 ಮನೆಗುಳ ಸಂಪೂರ್ಣ ಮುಕ್ತಾಯ ಆಗಿರುತ್ತವೆ ಎಂದು ನಮೂದಿಸಿದ್ದಾರೆ ಎಂದರೆ ಅವರು ಒತ್ತಾಯದಿಂದ ಮನೆ ಕಟ್ಟಿದ್ದಾರೆ ಎಂದು ನುಡಿದಿರುತ್ತಾರೆ. ಒಂದು ಮನೆಯ ಕಟ್ಟಡ ಪೂರ್ಣ ಗೊಳ್ಳಬೇಕಾದರೆ 2-3 ವರ್ಷಗಳ ಸಮಯ ಬೇಕಾಗುತ್ತವೆ ಎಂದರೆ ನಿಜ. ಈಗ ತೊರಿಸಿದ 8 ಛಾಯಾಚಿತ್ರಗಳಲ್ಲಿ ಇರುವ 11 ರಿಂದ 17 ನೇ ಪ್ರತಿವಾದಿಗಳು ಕಟ್ಟಿದ ವಾಸದ ಮನೆಗಳು ಎಂದರೆ ಸರಿಯಲ್ಲ. ಸದರಿ ಛಾಯಾಚಿತ್ರ ಗಳಲ್ಲಿ 11 ರಿಂದ 17 ನೇ ಪ್ರತಿವಾದಿಗಳು ಯಾರಾದರು ನ್ಯಾಯಾಲಯದಲ್ಲಿ ಇದ್ದಾರಾ ಎಂದರೆ ಇರುವುದಿಲ್ಲ. ಈ ದಿನ ಈಗ ತೆರೆದ ನ್ಯಾಯಾಲಯದಲ್ಲಿ ಸುರೇಶ ಈರಪ್ಪ ಪಟ್ಟನಶೆಟ್ಟಿ ರವರು 16 ನೇ ಪ್ರತಿವಾದಿಯ ಅಣ್ಣ ಇರುತ್ತಾರೆ. ಸದರಿ ಈಗ ತೊರಿಸಿದ 8 ಛಾಯಾ ಚಿತ್ರಗಳಲ್ಲಿ ಇರುವ ಮನೆಗಳು 11 ರಿಂದ 17 ನೇ ಪ್ರತಿವಾದಿಗಳು ಕಟ್ಟುತ್ತಿರುವ ವಿಷಯ ನನಗೆ ಗೊತ್ತಿದ್ದರು ಸಹ ಸದರಿ ಮನೆಗಳು ಕಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2018-19 ನೇ ಸಾಲಿನಲ್ಲಿ ಸರ್ವೆ ನಂ 188/1 ರಲ ಜಮಿನದಲ್ಲಿ ಜೋಳದ ಬೆಳೆ ಬೆಳೆದಿದ್ದೇವು. ನ್ಯಾಯಾಲಯದ ಆಯುಕ್ತರು ಸಲ್ಲಿಸಿದ ವರದಿಗೆ ನಮ್ಮದು ಯಾವುದೇ ತಕರಾರು ಇರುವುದಿಲ್ಲ. ನ್ಯಾಯಾಲಯದ ಆಯುಕ್ತರು ತಮ್ಮ ವರದಿಯಲ್ಲಿ ಸದರಿ ಸರ್ವೆ ನಂ 188/1 ರಲ್ಲಿ ಬೆಳೆ ಇದೆ ಅಂತಾ ಬರೆದಿರುವುದಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ನ್ಯಾಯಾಲಯದ ಆಯುಕ್ತರು ಸ್ಥಳ ಪರಿಶಿಲಬೆ ಮಾಡಲು ಬೆಟಿ

O.S. NO. 16/2018
PW – 2 .
Dated 14 –07–2026.

ನೀಡಿದಾಗ ಬೆಳೆ ಕಟಾವ ಆಗಿತ್ತು ಎಂದು ನುಡಿದಿರುತ್ತಾರೆ. ಸಾಮಾನ್ಯವಾಗಿ ಜೋಳದ ಬೆಳೆ ಮಾರ್ಚ ತಿಂಗಳಲ್ಲಿ ಕಟಾವಿಗೆ ಬರುತ್ತದೆ ಎಂದರೆ ರೆಎತರು ಯಾವಾಗ ಬೆಕಾದ ಸಿಜನನಲ್ಲಿ ಬೆಳೆ ಬೆಳೆಯಬಹುದು ಎಂದು ನುಡಿದಿರುತ್ತಾರೆ. ಸರ್ವೆ ನಂ . 188/1 ಜವಿನು ನಿರಾವರಿ ಜಮಿನ ಇದೆಯಾ ಎಂದರೆ ಇಲ್ಲ. ಸರ್ವೆ ನಂ. 188/1 ಲ್ಲಿ ಬೆಳೆದ ಬೆಳೆ ನ್ಯಾಯಾಲಯದ ಆಯುಕ್ತರು ಸ್ಥಳ ಪರಿಶಿಲನೆಗೆ ಬರುವ ಪೂರ್ವದಲ್ಲಿ ಕಟಾವ ಆಗಿತ್ತು. ನಾನು ಹೇಳುತ್ತಿರುವಂತೆ ಸದರಿ ಜಮಿನದಲ್ಲಿ ಯಾವುದೇ ಬೆಳೆ ಬೆಳೆಯುವುದಿಲ್ಲ ವಾಸದ ಮನೆಗಳು ಇವೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ 1881/ ರ ಜಮಿನು ಕಬಳಿಸ ಬೇಕು ಎಂಬ ದುರುದ್ದೇಶದಿಂದ ಒಟ್ಟು ಕುಟುಂಬದ ಉತ್ಪನ್ನದಿಂದ ಖರೀದಿಸಿರುವ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯು 11, 12, 15 ಇವರ ಹೆಂಡತಿಯರು ಮತ್ತು 17 ನೇ ಪ್ರತಿವಾದಿ ತಾಯಿ ಮತ್ತು 3, 13, 14 ಹಾಗು ಇತರರ ಜಂಟಿ ಮಾಲ್ಕಿ ಕಬ್ಜಾ ವಹಿವಾಟನಲ್ಲಿ ಇರುವ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಗೆ ನಮ್ಮ ಏಕತರ ಕುಟಂಬದ ಹಕ್ಕು, ಹಿತಾಸಕ್ತಿ, ಸಂಬದ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳಲ್ಲಿ ಇರುವ ಮನೆಗಳನ್ನು ತೆರವುಗೊಳಿಸಬೇಕೆಂದು ಇದೆ ಪ್ರಕರಣದಲ್ಲಿ ಮಧ್ಯಂತರ ಅರ್ಜಿ ಹಾಕಿಕೊಂಡಿದ್ದೇವು ಎಂದರೆ ಸರಿ. ಸದರಿ ಅರ್ಜಿ ರೂ. 1000/– ಖರ್ಚಿನ ಮೇಲೆ ವಜಾ ಆಗಿರುತ್ತದೆ ಎಂರದೆ ಸರಿ. ಸದರಿ ಅರ್ಜಿಯ ಮೇಲೆ ಅಪಿಲು ಮಾಡಿದ್ದೀರಾ ಎಂದರೆ ಮಾಡಿದ್ದೇವೆ. ಅದರ ಅಪಿಲು ಪ್ರತಿ ಹಾಜರ ಮಾಡಿದ್ದೀರಾ ಎಂದರೆ ಮಾಡುತ್ತೇನೆ.

O.S. NO. 16/2018
PW – 2 .
Dated 14 –07–2026.

ಪಾಟಿ ಸವಾಲುಃ 5 ರಿಂದ 8 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್ ವಾಯ್ ಪಿ ವಕೀಲರಿಂದಃ

ಪಟ್ಟಿಹಾಳ ಕೆ ಬಿ ಗ್ರಾಮ ಸರ್ವೆ ನಂ 155/3 ಮತ್ತು ಖೊದಾನಪೂರ ಗ್ರಾಮ ಸರ್ವೆ ನಂ. 55/1 ಸದರಿ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸಾಕ್ಷಿ ಪಟ್ಟಿಹಾಳ ಕೆ ಬಿ ಗ್ರಾಮ ಸರ್ವೆ ಸರ್ವೆ ನಂ.155/3 ಮಾತ್ರ ನಮ ಪಿತ್ರಾರ್ಜಿತ ಆಸ್ತಿ ಇದ್ದು ಖೊದಾನಪೂರ ಗ್ರಾಮದ 55/1 ಲ್ಯಾಂಡ ಟ್ರಿಬುನಲದಿಂದ ನಮ್ಮ ಕುಟುಂಬಕ್ಕೆ ಗ್ರ್ಯಾಂಟ ಆಗಿರುವ ಆಸ್ತಿ ಇದೆ ಎಂದು ನುಡಿದಿರುತ್ತಾರೆ. ಸದರಿ ಆಸ್ತಿಯಲ್ಲಿ 5 ರಿಂದ 8 ನೇ ಪ್ರತಿವಾದಿಗಳಿಗೆ ಸಮಾನ ಹಿಸ್ಸಾ ಹಕ್ಕು ಇದೆ ಎಂದರೆ ಸರಿಯಲ್ಲ. ದಾವಾ ಅನೂಸುಚಿ ಅ ಆಸ್ತಿ ಅನುಕ್ರಮ ಸಂಖ್ಯೆ 3 ರಿಂದ 6 ರಲ್ಲಿಯ ಒಟ್ಟು ಆಸ್ತಿ 11 ಎಕರೆ ಪೈಕಿ 9 ಎಕರೆ ಆಸ್ತಿಯನ್ನು ನನ್ನ ಅಜ್ಜ 6 ನೇ ಪ್ರತಿವಾದಿಗೆ ವಾಟ್ನಿ ಪ್ರಕಾರ ಹಕ್ಕು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಾಟ್ನಿ ಪತ್ರಕ್ಕೆ ನನ್ನ ತಂದೆ ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯು ತನ್ನ ಅಸುಂಡಿ ಗ್ರಾಮದ ಗಂಡನ ಮನೆ ಆಸ್ತಿಯ 4 ಎಕರೆ 16 ಗುಂಟೆ ಮಾರಾಟ ಮಾಡಿ ಬಂದ ಹಣವನ್ನು 9 ಎಕರೆ ಆಸ್ತಿ ಸಲುವಾಗಿ ನನ್ನ ಅಜ್ಜನಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಪೈಕಿ 8 ಮತ್ತು 9 ನೇ ಆಸ್ತಿಗಳನ್ನು 1 ರಿಂದ 4 ನೇ ಪ್ರತಿವಾದಿಗಳು ಸುಮಿತ್ರಾ ಬಾಯಿ ಜಕಾತಿರವರಿಂದ ನೊಂದಾಯಿತ ಖರೀದಿ ಪತ್ರದ ಮೂಲಕ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾವೇಲ್ಲರೂ ಒಟ್ಟು ಕುಟುಂಬದ

O.S. NO. 16/2018

PW – 2 .

Dated 14 –07–2026.

ಉತ್ಪನದಿಂದ ಖರೀದಿ ಮಾಡಿರುತ್ತೇವೆ ಎಂದು ಸಾಕ್ಷಿ ಸ್ವತ ನುಡಿದಿರುತ್ತಾರೆ. ದಾವಾ ಆಸ್ತಿಗಳ ಪೈಕಿ ಮನೆ ಆಸ್ತಿಗಳಾದ ಅನುಕ್ರಮ 2 ರಿದ 5 ಮತ್ತು ಪಟ್ಟಿಗಾಳ ಗ್ರಾಮ ಸರ್ವೆ ನಂ. 188/1 ಆಸಿಗಳನ್ನು ಹೊರತು ಪಡಿಸಿ ಉಳಿದೇಲ್ಲ ಆಸ್ತಿಗಳು ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಇರುತ್ತವೆ ಎಂದರೆ ಸಾಕ್ಷಿ ದಾವಾದ ಎಲ್ಲ ಆಸ್ತಿಗಳು ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಇರುತ್ತವೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಗಳಲ್ಲಿ ಹೆಣ್ಣು ಮಕ್ಕಳ ಹಿಸ್ಸಾ ಬಿಡಿಸಿಕೊಂಡಿದ್ದೀರಾ ಎಂದರೆ ಇಲ್ಲ. ನನ್ನ ತಂದೆಯ ಸಹೊದರರು ಮತ್ತು ಸಹೊದರಿಯರ ನಮಗೆ ಇಲ್ಲಿಯವರೆಗೆ ಯಾವುದೇ ವಾಟ್ನಿಗಳು ಆಗಿರುವುದಿಲ್ಲ. ದಾವಾದ ಆಗಳ ಷಏಕಿ ಪಿತ್ರಾರ್ಜಿತ ಆಸ್ತಿಗಳಲ್ಲಿ 5 ರಿಂದ 8 ನೇ ಪ್ರತಿವಾದಿಯರಿಗೆ ಸಾಮೂಹಿಕ ಹಿಸ್ಸಾ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವಂತೆ ನಾವು ದಾವಾ ಆಸ್ತಿಗಳ ಸಾಮೂಹಿಕ ಕಬ್ಜಾ ವಹಿವಾಟಗಳಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು . )

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.